ಸಿ.ಸಿ. ನಂ– 902/2022

Dw–2

<u>ದಿನಾಂಕಃ 25–02–2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಮುಖ್ಯ ವಿಚಾರಣೆ ಶ್ರೀ. ಆರ ಆರ ಕೆ ಆರೋಪಿ ಪರ ವಕೀಲರಿಂದ–** ಆರೋಪಿ ಹಾಗೂ ಫಿರ್ಯಾದಿಯ ಪರಿಚಯ ಇದೆ. ಆರೋಪಿಯ ತಾಯಿ ಪಿರ್ಯಾದಿ ಕಡೆಯಿಂದ ರೂ.5 ಲಕ್ಷ ಪಡೆದಿದ್ದರು. ಭದ್ರತೆಗಾಗಿ ಆರೋಪಿ 3 ಚೆಕ್ಕಗಳನ್ನು ಫಿರ್ಯಾದಿಗೆ ನೀಡಿದ್ದರು. ನಂತರ ಆರೋಪಿಯ ತಾಯಿ ಮೃತ ಪಟ್ಟಿರುತ್ತಾರೆ. ಅಸಲು ಹಾಗೂ ಬಡ್ಡಿ ಸೇರಿ ರೂ.6,20,000/– ಹಣ ಕೊಡಬೇಕಾಗಿತ್ತು. ರೂ. 10,000/– ಹಣವನ್ನು ಫೋನ ಪೇ ಮಾಡಿರುತ್ತಾರೆ ಹಾಗೂ ರೂ.6,10,000/– ಹಣವನ್ನು ನಗದು ರೂಪದಲ್ಲಿ ಫಿರ್ಯಾದಿಗೆ ನೀಡಿರುತ್ತಾರೆ. ಫಿರ್ಯಾದಿ ರೂ. 6,10,000/– ಹಣವನ್ನು ಮುಟ್ಟಿದೆ ಎಂದು ದಿನಾಂಕಃ 02–05–2022 ರಂದು ಬಾಂಡ ಬರೆದು ಕೊಟ್ಟಿರುತ್ತಾರೆ. ಆ ಸಮಯದಲ್ಲಿ ನಾನು ಹಾಗೂ ಬಿ ಎಸ್ ಸಿಂಧೂರ ಹಾಗೂ ಮಂಜುನಾಥ ಬೋವಿ ಮತ್ತು ಬಸಪ್ಪ ಕತ್ತಿ ಇದ್ದವೆ. ನಾನು ಸದರಿ ಬಾಂಡಗೆ ಸಹಿ ಮಾಡಿರುತ್ತೇನೆ. ಸಾಕ್ಷಿ ಸದರಿ ಫಿರ್ಯಾದಿ ಬಾಂಡನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಡಿ–3 ಎಂದು ಗುರುಸಲಾಗಿದೆ. ಸಾಕ್ಷಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ–3(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಲಾಡ ವಕೀಲರ ಕಡೆಗೆ ನೋಟರಿ ಮಾಡಿಸಲಾಗಿತ್ತು. ಫಿರ್ಯಾದಿ ಚೆಕ್ಕಗಳನ್ನು ವಾಪಸ ನೀಡಲಿಲ್ಲ. ಫಿರ್ಯಾದಿಗೆ ಹಣ ನೀಡಿದಿದ್ದನ್ನು ವಿಡಿಯೋ ಮಾಡಿಕೊಳ್ಳಲಾಗಿದೆ. ಆರೋಪಿ ಫಿರ್ಯಾದಿಗೆ ಖಾಲಿ ಚೆಕ್ಕಗಳನ್ನು ನೀಡಿದ್ದರು. ಆರೋಪಿ ಫಿರ್ಯದಿಗೆ ಯಾವುದೇ ಹಣ ನೀಡುವ ಹೊಣೆಗಾರಿಕೆ ಇಲ್ಲ.

**ಪಾಟಿ ಸವಾಲುಃ** ಫಿರ್ಯಾದಿ ಪರ ವಕೀಲರನ್ನು ಕೂಗಿಸಲಾಯಿತು. ಗೈರು ಹಾಜರು ಇರುವ ಕಾರಣ ನ್ಯಾಯದಾನ ದೃಷ್ಟಿಯಿಂದ ಪಾಟಿ ಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/–

ಹೆಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.